ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ    ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ

# ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

## ಪರಿಚಯ ಮತ್ತು ಚಟುವಟಿಕೆಗಳು

ICAR

### ನಮ್ಮ ಮಾತೃ ಸಂಸ್ಥೆಯ ಬಗ್ಗೆ. . . .

ಸಿರಿಗೆರೆಯ ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು 1982ರಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ನಾಡಿನಾದ್ಯಂತ ಗ್ರಾಮೀಣ ಕ್ಷೇತ್ರದ ಬೆಳವಣಿಗೆಗಾಗಿ ಕಳೆದ 28 ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಈ ಸಂಸ್ಥೆಯು ಸ್ಥಳೀಯವಾಗಿ ಜನಪ್ರಿಯವಾಗಿದೆಯಲ್ಲದೇ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಹೆಸರನ್ನು ಗಳಿಸಿದ್ದು, ಹಲವು ಸರಕಾರಿ ಮತ್ತು ಸರಕಾರಿಯೇತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಮುನ್ನಡೆಯುತ್ತಿದೆ. ಸಂಸ್ಥೆಯ ಸಾಧನೆಗಳನ್ನು ಗಮನಿಸಿ, ಭಾರತ ಸರ್ಕಾರ 1987ರಲ್ಲಿ ಪ್ರತಿಷ್ಠಿತ "ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ"ಯನ್ನು ಮತ್ತು ಜೋಹನ್ಸ್‌ಬರ್ಗ್‌ನ 'ದಿ ಈಕ್ವೇಟರ್ ಇನಿಷಿಯೇಟೀವ್'ನ ಸಂಸ್ಥೆಯ ತಾಂತ್ರಿಕ ಸಲಹಾ ಸಮಿತಿಯು 2002ರಲ್ಲಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಸಾಮಾಜಿಕ ಅರಣ್ಯ, ಔಷಧಿ ಮತ್ತು ಸುಗಂಧ ದ್ರವ್ಯ ಸಸ್ಯಗಳನ್ನು ಬೆಳೆಸಿ ಕಾಪಾಡುವಲ್ಲಿ ಹಾಗೂ ಸಮಗ್ರ ಗ್ರಾಮೀಣಾಭಿವೃದ್ಧಿಯಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಪರಿಗಣಿಸಿ, ಕೇಂದ್ರ ಸರ್ಕಾರದ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇವರು 'ಕೃಷಿ ವಿಜ್ಞಾನ ಕೇಂದ್ರ'ವನ್ನು 2004 ರಲ್ಲಿ ಈ ಸಂಸ್ಥೆಗೆ ಮಂಜೂರು ಮಾಡಿದೆ. ನಂತರ ಕಾರ್ಯೋನ್ಮುಖವಾದ ಈ ಕೇಂದ್ರವು ದಾವಣಗೆರೆಯಲ್ಲಿ ಸ್ಥಾಪಿತವಾಗಿದ್ದು, ಪ್ರಗತಿ ಪಥದಲ್ಲಿದೆ.

## ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.

### ನಮ್ಮ ದೃಷ್ಟಿಕೋನ

ಕೌಶಲ್ಯ ಪೂರಿತ ತಾಂತ್ರಿಕತೆಗಳು ಮತ್ತು ಸುಧಾರಿತ ವೈಜ್ಞಾನಿಕ ಕೃಷಿ ಪದ್ಧತಿಗಳ ಸಹಾಯದಿಂದ ಕೃಷಿ ಉತ್ಪಾದನೆ ಮತ್ತು ಲಾಭಾಂಶವನ್ನು ಹೆಚ್ಚಿಸುವುದರ ಮೂಲಕ ಸುಸ್ಥಿರ ಸಮಗ್ರ ಗ್ರಾಮೀಣ ಅಭಿವೃದ್ಧಿ

### ನಮ್ಮ ಧ್ಯೇಯ

ಗ್ರಾಮೀಣ ಜನತೆಯನ್ನು ಮಾರುಕಟ್ಟೆ ಬೆಂಬಲಿತ ಕೃಷಿ ಉತ್ಪಾದಕತೆ ಮತ್ತು ಲಾಭಾಂಶ ಅಧಿಕಗೊಳಿಸಲು, ಕೌಶಲ್ಯಭರಿತ ಉದ್ಯಮ ಕೈಗೊಳ್ಳಲು, ಸುಸ್ಥಿರ, ಸಾಮಾಜಿಕ ಮತ್ತು ಆರ್ಥಿಕ ಜಾಲಬಂಧ ಏರ್ಪಡಿಸಲು ಮತ್ತು ಪ್ರಗತಿಶೀಲ ಯೋಜನೆಗಳಲ್ಲಿ ಸಹಭಾಗಿತ್ವ ಪಡೆಯಲು ಜಾಗೃತಗೊಳಿಸುವುದಕ್ಕೆ ಅಗತ್ಯವಿರುವ ಸುಧಾರಿತ ನಿರ್ವಹಣಾ ವ್ಯವಸ್ಥೆಯನ್ನು ನಿರ್ಮಿಸುವುದು.

ಜೂನ್ 2005 ರಲ್ಲಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದ ಕೇಂದ್ರವು ಭಾರತದ ಕೃಷಿ ವಿಜ್ಞಾನ ಕೇಂದ್ರಗಳ ಸಮುಚ್ಛಯದಲ್ಲಿ ನಮ್ಮ ಕೇಂದ್ರವು ವಲಯ 8ರಲ್ಲಿ ಬರುತ್ತದೆ. ಇದುವರೆಗೆ ಜಿಲ್ಲೆಯ ಸುಮಾರು 350 ಹಳ್ಳಿಗಳನ್ನು ಸಂಪರ್ಕಿಸಿ, 6000 ರೈತರೊಂದಿಗೆ ಸಂಬಂಧ ಹೊಂದಿದೆ. ಮಧ್ಯ ಕರ್ನಾಟಕದಲ್ಲಿರುವ ಪ್ರಮುಖ ಕೃಷಿ ಚಟುವಟಿಕೆಗಳ ಜೊತೆಗೆ ಅನೇಕ ಉದ್ಯಮಗಳ ಕೇಂದ್ರ ತಾಣವಾಗಿರುವ ದಾವಣಗೆರೆ ಜಿಲ್ಲೆಯಲ್ಲಿ ನಮ್ಮ ಕೇಂದ್ರದ ಅಗತ್ಯತೆ ಬಹಳಷ್ಟಿದೆ. ಕದಳಿ ಮತ್ತು ಕೇಸರಿವನಗಳೆಂಬ ಎರಡು ಸ್ಥಳಗಳಲ್ಲಿ ಕಛೇರಿ ಮತ್ತು ತಾಕುಗಳನ್ನು ಹೊಂದಿರುವ ಕೇಂದ್ರ, ದಾವಣಗೆರೆ ಜಿಲ್ಲಾ ಕೇಂದ್ರದಲ್ಲಿಯೇ ಇದ್ದು, ರೈತರು ಸುಲಭವಾಗಿ ಒಡನಾಡಲು ಸಹಾಯಕವಾಗಿದೆ. ಶೇಕಡಾ 60 ಕ್ಕೂ ಮೀರಿ ಸಣ್ಣ ರೈತರಿರುವ ಈ ಜಿಲ್ಲೆಯಲ್ಲಿ ಅಧಿಕವಾಗಿ ಮೆಕ್ಕೆಜೋಳ, ಭತ್ತ, ಕಬ್ಬು, ಶೇಂಗಾ, ಸೂರ್ಯಕಾಂತಿ, ಕಡಲೆ, ರಾಗಿ, ತರಕಾರಿ, ಹೂವು, ತೆಂಗು, ಅಡಿಕೆ, ಮಾವು, ಸಪೋಟಾ, ದಾಳಿಂಬೆ ಮತ್ತು ಸಣ್ಣ ಪ್ರಮಾಣದಲ್ಲಿ ಕಿರುಧಾನ್ಯಗಳನ್ನು ಬೆಳೆಯುವ ಪರಿಪಾಠವಿದೆ. ಇರುವ ಆರು ತಾಲ್ಲೂಕುಗಳಲ್ಲಿ ನಾಲ್ಕು ತಾಲ್ಲೂಕುಗಳು (ದಾವಣಗೆರೆ, ಹರಿಹರ, ಹೊನ್ನಾಳಿ ಮತ್ತು ಚನ್ನಗಿರಿ) ಕೆಲಭಾಗದಲ್ಲಿ ಭದ್ರಾ ನದಿ ಕಾಲುವೆಯ ನೀರಾವರಿ ಸೌಲಭ್ಯವನ್ನು ಪಡೆದರೆ, ಉಳಿದ ಎರಡು (ಜಗಳೂರು ಮತ್ತು ಹರಪನಹಳ್ಳಿ) ಹೆಚ್ಚಾಗಿ ಮಳೆಯಾಶ್ರಿತ ಕೃಷಿ ಅವಲಂಬಿಸಿದೆ.

ಜಿಲ್ಲೆಯಲ್ಲಿ 4,70,022 ಹೆಕ್ಟೇರ್ ಕೃಷಿ ಪೂರಕ ಭೂಮಿಯಿದ್ದು, ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚುತ್ತಿದ್ದು (2001ರ ಗಣತಿ ಪ್ರಕಾರ 17.90 ಲಕ್ಷ) ಪ್ರತಿ ವ್ಯಕ್ತಿಗೆ ಸಿಗುವ ಭೂಪ್ರಮಾಣ ಕಡಿಮೆಯಾಗುತ್ತಿದೆ. ಲಾಭ ನೀಡದ ಕೃಷಿ ಬದುಕಿನಿಂದ ಜಿಗುಪ್ಸೆಗೊಂಡ ರೈತರು ಜೀವ ತೆಗೆದುಕೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕೇಂದ್ರದಿಂದ

ಕೇಂದ್ರದಿಂದ ಮಾನಸಿಕ ಸ್ಥೈರ್ಯ ಪಡೆದುಕೊಂಡ ಅನೇಕ ರೈತರು ಮರಳಿ ಕೃಷಿಯನ್ನು ಹೆಚ್ಚಿನ ಕ್ಷಮತೆಯಿಂದ ಅಪ್ಪಿಕೊಳ್ಳುತ್ತಿದ್ದಾರೆಂದು ತಿಳಿಸಲು ಹರ್ಷವಾಗುತ್ತದೆ. ಪ್ರತಿ ಅಂಗುಲ ಭೂಮಿ ಮತ್ತು ಪ್ರತಿ ಹನಿ ನೀರನ್ನು ಉಪಯೋಗಿಸುವ ಮನೋಭಾವವನ್ನು ರೈತರಲ್ಲಿ ಬೆಳೆಸುವೆಡೆಗೆ ಕೇಂದ್ರವು ಶ್ರಮಿಸುತ್ತಿದೆ. ತನ್ನ ಕಾರ್ಯಚಟುವಟಿಕೆಗಳ ಯೋಜನೆಯನ್ನು ತಯಾರಿಸುವಲ್ಲಿ ವೈಜ್ಞಾನಿಕ ಸಲಹಾ ಸಮಿತಿಯ ಮತ್ತು ಇತರ ರೈತ ಸಂಘಟನೆಗಳ ಸಲಹೆ ಪಡೆದು ಹಿಂದಿನ ವರ್ಷಗಳಲ್ಲಿ ಅನೇಕ ಹೊಸತಳಿ, ಹೊಸ ತಂತ್ರಜ್ಞಾನ, ವಿಧಾನ, ಮಾಹಿತಿಗಳನ್ನು ರೈತ ಸಮುದಾಯಕ್ಕೆ ಕೇಂದ್ರವು ಪರಿಚಯಿಸಿದೆ.

ರೈತರಷ್ಟೇ ಅಲ್ಲದೇ, ಮಕ್ಕಳು, ಮಹಿಳೆಯರು, ವಿದ್ಯಾರ್ಥಿಗಳು, ಯುವಕ-ಯುವತಿಯರು, ಉದ್ಯಮಿಗಳು, ಸರ್ಕಾರೇತರ ಸಂಸ್ಥೆಗಳು, ಹೀಗೆ ಹಲವಾರು ಕ್ಷೇತ್ರಗಳಲ್ಲಿನ ಸದಸ್ಯರೊಂದಿಗೆ ಕೈಜೋಡಿಸಿ ವಿವಿಧ ಬಗೆಯ ನೂತನ ಕಾರ್ಯಕ್ರಮಗಳನ್ನು ಕೇಂದ್ರವು ನಡೆಸುತ್ತಿದೆ. ರೈತರ ಜಮೀನುಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸುವುದರ ಜೊತೆಗೆ ಪುರುಷ ಮತ್ತು ಮಹಿಳೆಯರನ್ನು ಸ್ವ-ಸಹಾಯ ಸಂಘಗಳ ರೂಪದಲ್ಲಿ ಸಂಘಟಿಸುವ ಕಾರ್ಯವನ್ನೂ ಕೂಡ ಕೇಂದ್ರ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ನಡೆಸುತ್ತಿದೆ.

ಕೇಂದ್ರವು ಮುಖ್ಯವಾಹಿನಿ ಕೃಷಿಯ ಜೊತೆಗೆ, ಆದಾಯ ತರುವ ಇತರ ಚಟುವಟಿಕೆಗಳನ್ನು (ಮೀನುಕೃಷಿ, ಅಜೋಲ್ಲಾಬೆಳೆ, ಅಣಬೆಕೃಷಿ, ಎರೆಹುಳುಗೊಬ್ಬರ) ಜೋಡಿಸಿ, ರೈತರನ್ನು ಸಮಗ್ರ ಕೃಷಿ ಪದ್ಧತಿಗಳೆಡೆಗೆ ಕೊಂಡೊಯ್ಯುವ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಸ್ವ ಉದ್ಯೋಗಶೀಲತೆಯನ್ನು ರೂಢಿಸಿಕೊಳ್ಳಲು ಗ್ರಾಮೀಣ ಯುವಕ-ಯುವತಿಯರಿಗೆ ಅನೇಕ ಬಗೆಯ ಕೌಶಲ್ಯ ತರಬೇತಿಗಳನ್ನು ನಡೆಸಲಾಗುತ್ತಿದೆ. ಸಾವಯವ ಮತ್ತು ಪರ್ಯಾಯ ಕೃಷಿಯ ಒಲವನ್ನು ಪೋಷಿಸುವ ವಿಶೇಷ ಕಾರ್ಯಯೋಜನೆಗಳನ್ನು ಕೇಂದ್ರವು ಪ್ರೋತ್ಸಾಹಿಸುತ್ತಿದೆ. ಕೇಂದ್ರದ ಪ್ರಾತ್ಯಕ್ಷಿಕಾ ಘಟಕ ಮತ್ತು ತಾಕುಗಳಲ್ಲಿ ವಿವಿಧ ರೀತಿಯ ಬೆಳೆ ತಳಿಗಳು, ಮೀನುಮರಿ ಪಾಲನೆ, ಅಲಂಕಾರಿಕಾ ಮೀನು ಉತ್ಪಾದನೆ, ಮೇವಿನ ಬೆಳೆಗಳು, ಅಜೋಲ್ಲಾ, ಹೈನುಗಾರಿಕೆ, ತೋಟಗಾರಿಕೆ ಬೆಳೆಗಳ ವಿಶೇಷ ಪದ್ಧತಿಗಳು ಹೀಗೆ ಹಲವಾರು ವಿಶೇಷತೆಗಳನ್ನು ರೈತರಿಗೆ ಹಾಗೂ ಇತರ ಆಸಕ್ತರಿಗಾಗಿ ನಿರ್ಮಿಸಲಾಗಿದೆ. ಕೇಂದ್ರದ ಸ್ಥಾಪನೆ ಮತ್ತು ಚಟುವಟಿಕೆಗಳಿಗೆ ಆರ್ಥಿಕ ಸಹಾಯ ಮತ್ತು ಸಲಹೆ ನೀಡುತ್ತಿರುವ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಮತ್ತು ವಲಯ ಸಂಯೋಜಕ ಘಟಕ, ವಲಯ 8 ಬೆಂಗಳೂರು, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆಡಳಿತ ಮಂಡಳಿ, ವೈಜ್ಞಾನಿಕ ಸಲಹಾ ಸಮಿತಿ, ವೈಜ್ಞಾನಿಕ ತಂತ್ರಜ್ಞಾನ, ಮಾಹಿತಿಗಳನ್ನು ನೀಡುತ್ತಿರುವ ಕೃಷಿ ವಿಶ್ವವಿದ್ಯಾನಿಲಯಗಳು, ಬೆಂಗಳೂರು ಮತ್ತು ಧಾರವಾಡ, ಸರ್ಕಾರದ ಅನೇಕ ಇಲಾಖೆಗಳು, ರೈತ ಬಾಂಧವರು ಮತ್ತು ರೈತ ಸಂಘಟನೆಗಳು, ಇನ್ನಿತರ ಪೂರಕ ಸಂಸ್ಥೆಗಳು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಮ್ಮ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿವೆ.

ಜಿಲ್ಲೆಯ ರೈತರ ಅಭ್ಯುದಯಕ್ಕೆ ಕೃಷಿ ಮಾಹಿತಿ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದು, ವೈಜ್ಞಾನಿಕ ಬೆಳವಣಿಗೆಗಳನ್ನು ಅವರ ಮನ-ಜಮೀನುಗಳಿಗೆ ತಲುಪಿಸುವ ಕಾರ್ಯದಲ್ಲಿ ಕೇಂದ್ರವು ಸದಾ ಜಾಗೃತವಾಗಿರುವುದು. ಸತತ 28 ವರ್ಷಗಳಿಂದ ಗ್ರಾಮೀಣ ಸೇವೆಯಲ್ಲಿ ನಿರತವಾಗಿರುವ ಮಾತೃ ಸಂಸ್ಥೆಯಾದ ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ವೈಜ್ಞಾನಿಕ ವಿಚಾರ ಮತ್ತು ಮಾಹಿತಿಗಳ ಬೆನ್ನೆಲುಬಾಗಿರುವ ಕೇಂದ್ರವು ಸಮಗ್ರ ಗ್ರಾಮೀಣಾಭಿವೃದ್ಧಿಯ ಕನಸನ್ನು ನನಸಾಗಿಸುವೆಡೆಗೆ ದಿಟ್ಟ ಹೆಜ್ಜೆ ಇಡುತ್ತಿದೆ.

**ಆಜ್ಞಾ ಕರ್ತವ್ಯಗಳು:**

- ಸ್ಥಳ ನಿರ್ದಿಷ್ಟ, ಸುಸ್ಥಿರ ಭೂಬಳಕೆ ವ್ಯವಸ್ಥೆಗೆ ಸೂಕ್ತ ತಂತ್ರಜ್ಞಾನವನ್ನು ಗುರುತಿಸಲು ರೈತರ ತಾಕುಗಳಲ್ಲಿ ತಂತ್ರಜ್ಞಾನ ಪರೀಕ್ಷೆಗಳನ್ನು ನಡೆಸುವುದು.
- ಉತ್ಪನ್ನ ಮಾಹಿತಿ ಪಡೆಯಲು ಹಾಗೂ ರೈತರ ಅಭಿಪ್ರಾಯ ತಿಳಿಯಲು ವಿವಿಧ ಬೆಳೆಗಳಲ್ಲಿ ಮೂಂಚೂಣಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಅಧಿಕ ಉತ್ಪಾದನೆಗೆ ಮತ್ತು ಸ್ವ-ಉದ್ಯೋಗ ಅವಕಾಶಗಳಿಗಾಗಿ ಕಾರ್ಯದಿಂದ ಕಲಿಕೆಯ ಬಗ್ಗೆ ಒತ್ತು ನೀಡಿ ರೈತರಿಗೆ ಹಾಗೂ ಗ್ರಾಮೀಣ ಯುವಕರಿಗೆ ಕೃಷಿ ಮತ್ತು ಸಂಬಂಧಿತ ವಿಷಯಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಕೃಷಿ ಸಂಶೋಧನೆಯ ತಂತ್ರಜ್ಞಾನಗಳ ಬಗ್ಗೆ ವಿಸ್ತರಣಾ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಜಿಲ್ಲೆಯ ಕೃಷಿ ಆರ್ಥಿಕತೆ ಅಭಿವೃದ್ಧಿಗಾಗಿ ನಿಯುಕ್ತಗೊಳ್ಳುವ ಸರ್ಕಾರಿ, ಖಾಸಗಿ ಮತ್ತು ಸ್ವಯಂಸೇವಾ ಕ್ಷೇತ್ರಗಳಲ್ಲಿನ ಯೋಜನೆಗಳಿಗೆ ಸಂಪನ್ಮೂಲ ವಿದ್ಯಾ ಕೇಂದ್ರವಾಗಿರುವುದು.
- ಸೂಕ್ತ ಕೃಷಿ ತಂತ್ರಜ್ಞಾನದ ಪ್ರಸರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ವಿವಿಧ ವಿಶೇಷ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಮತ್ತು ಬೀಜ ಹಾಗೂ ಉತ್ತಮ ಗುಣಮಟ್ಟದ ನಾಟಿ ಸಸಿಗಳನ್ನು ಉತ್ಪಾದಿಸುವುದು.

## ಸಿಬ್ಬಂದಿ ವಿವಿರದ ಕೋಷ್ಟಕ

| ಕ್ರ.ಸಂ | ಹೆಸರು | ಹುದ್ದೆ |
|---|---|---|
| ಡಾ. ದೇವರಾಜ ಟಿ.ಎನ್. | | ಕಾರ್ಯಕ್ರಮ ಸಂಯೋಜಕರು |
| ಶ್ರೀ ಬಸವನಗೌಡ ಎಂ.ಜಿ. | | ವಿಷಯ ತಜ್ಞರು (ತೋಟಗಾರಿಕೆ) |
| ಶ್ರೀ ಮಲ್ಲಿಕಾರ್ಜುನ ಬಿ.ಓ. | | ವಿಷಯ ತಜ್ಞರು(ಬೇಸಾಯ ಶಾಸ್ತ್ರ) |
| ಡಾ. ಜಯದೇವಪ್ಪ ಜಿ.ಕೆ. | | ವಿಷಯ ತಜ್ಞರು (ಪಶು ವಿಜ್ಞಾನ) |
| ಡಾ. ಪ್ರದೀಪ್ ಹೆಚ್.ಎಂ. | | ವಿಷಯ ತಜ್ಞರು (ಮಣ್ಣು ವಿಜ್ಞಾನ) |
| ಶ್ರೀ ಪ್ರಸನ್ನಕುಮಾರ ಎನ್. | | ವಿಷಯತಜ್ಞರು (ಸಸ್ಯ ಸಂರಕ್ಷಣೆ) |
| ಶ್ರೀ ರಘುರಾಜ ಜೆ. | | ವಿಷಯತಜ್ಞರು (ಕೃಷಿ ವಿಸ್ತರಣೆ) |
| ಕುಮಾರಿ ಕವಿತಾ ಪಿ. | | ಲ್ಯಾಬ್ ಟೆಕ್ನಿಷಿಯನ್ |
| ಶ್ರೀ ವಿಜಯಕುಮಾರ ಎಸ್.ಬಿ. | | ಕ್ಷೇತ್ರ ವ್ಯವಸ್ಥಾಪಕರು |
| ಶ್ರೀ ಸಂತೋಷ್ ಬಿ. | | ಕಾರ್ಯಕ್ರಮ ಸಹಾಯಕರು (ಗಣಕಯಂತ್ರ) |
| ಶ್ರೀಮಲ್ಲಿಕಾರ್ಜುನ ಎಸ್. ಗುಡಿಹಿಂದಲ | | ಸಹಾಯಕರು |
| ಶ್ರೀಮತಿ ಮಮತ ಹೆಚ್.ಎಂ. | | ಶೀಘ್ರಲಿಪಿಗಾರರು (ಗ್ರೇಡ್-3) |
| ಶ್ರೀ ಶಿವಕುಮಾರ ಬಿ. | | ಸಹಾಯಕ ಸಿಬ್ಬಂದಿ (ಗ್ರೇಡ್-1) |
| ಶ್ರೀ ಶಿವಕುಮಾರ ಎಸ್.ಈ. | | ಸಹಾಯಕ ಸಿಬ್ಬಂದಿ (ಗ್ರೇಡ್-1) |
| ಶ್ರೀ ಮರುಳಸಿದ್ದಯ್ಯ ಎನ್.ಎಂ. | | ಡ್ರೈವರ್ |
| ಶ್ರೀ ಶಿವಕುಮಾರ ಎಸ್. | | ಡ್ರೈವರ್ |

## ಪ್ರಮುಖ ತರಬೇತಿ ವಿಷಯಗಳು:

ಶಿಕ್ಷಣಾರ್ಥಿಗಳ ಅವಶ್ಯಕತೆಗೆ ಮತ್ತು ಆಸಕ್ತಿಗೆ ಅನುಗುಣವಾಗಿ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಿತ ವಿಷಯಗಳಲ್ಲಿ ವಿವಿಧ ತರಬೇತಿಗಳನ್ನು ನೀಡಲಾಗುವುದು.

- ಏಕದಳ, ಬೇಳೆಕಾಳು, ಎಣ್ಣೆಕಾಳು, ವಾಣಿಜ್ಯ, ತರಕಾರಿ, ಪುಷ್ಪ ಹಾಗೂ ತೋಟಗಾರಿಕಾ ಬೆಳೆಗಳ ಆಧುನಿಕ ಉತ್ಪಾದನಾ ತಾಂತ್ರಿಕತೆ.
- ಬೆಳೆ ಪದ್ಧತಿಗಳು ಹಾಗೂ ಪರ್ಯಾಯ ಬೆಳೆ ಯೋಜನೆಗಳು.
- ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬೀಜೋತ್ಪಾದನಾ ತಾಂತ್ರಿಕತೆ.
- ಬೆಳೆಗಳಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ.
- ಬೆಳೆಗಳಲ್ಲಿ ಬರುವ ಕೀಟ ಮತ್ತು ರೋಗಗಳ ಸಮಗ್ರ ಹತೋಟಿ ಕ್ರಮಗಳು.
- ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳ ಪ್ರಾಮುಖ್ಯತೆ ಹಾಗೂ ಆಧುನಿಕ ಉತ್ಪಾದನಾ ತಾಂತ್ರಿಕತೆ.
- ಮಣ್ಣು ಮತ್ತುನೀರು ಸಂರಕ್ಷಣೆ, ಮಣ್ಣು ಪರೀಕ್ಷೆಯ ಪ್ರಾಮುಖ್ಯತೆ, ಮಣ್ಣು ಮಾದರಿ ತೆಗೆಯುವುದು ಮತ್ತು ಮಣ್ಣು ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಬೆಳೆಗಳಿಗೆ ರಸಗೊಬ್ಬರ ಪೂರೈಕೆ ಮಾಡುವುದು.
- ಧಾನ್ಯಸಂರಕ್ಷಣೆ.
- ನೀರಿನಲ್ಲಿ ಕರಗುವ ರಸಗೊಬ್ಬರಗಳ ಮೂಲಕ ಬೆಳೆಯಲ್ಲಿ ಪೋಷಕಾಂಶಗಳ ಪೂರೈಕೆ.

- ಸಮಸ್ಯಾತ್ಮಕ ಮಣ್ಣು ಮತ್ತು ಅದರ ನಿರ್ವಹಣೆ.
- ಸಸ್ಯ ಬೆಳೆ ವರ್ಧಕಗಳ ಬಳಕೆ.
- ಸಮಗ್ರ ನೀರು ನಿರ್ವಹಣೆ.
- ಜಲಾನಯನ ಅಭಿವೃದ್ಧಿ ಮತ್ತು ಜಲಸಂವರ್ಧನೆ.
- ಸಮಗ್ರ ಕೃಷಿ ಪದ್ಧತಿ.
- ಸಾವಯವ, ಸಹಜ, ಸುಸ್ಥಿರ ಹಾಗೂ ಪರ್ಯಾಯ ಕೃಷಿ.
- ಸುಧಾರಿತ ಕಾಂಪೋಸ್ಟ್, ಹಸಿರುಎಲೆ, ಜೈವಿಕ ಹಾಗೂ ಎರೆಹುಳ ಗೊಬ್ಬರಗಳ ತಯಾರಿಕೆ.
- ಹೈನುಗಾರಿಕೆ, ಕುರಿ, ಆಡು, ಹಂದಿ, ಕೋಳಿ ಮತ್ತು ಮೊಲ ಸಾಕಾಣಿಕೆ.
- ಪಶು ಆಹಾರ ತಯಾರಿಕೆ.
- ಮೇವಿನ ಬೆಳೆಗಳ ಆಧುನಿಕ ಉತ್ಪಾದನಾ ತಾಂತ್ರಿಕತೆ.
- ಒಣಮೇವಿನ/ಕೆಳದರ್ಜೆಯ ಮೇವಿನ ಪೌಷ್ಟಿಕತೆ ಹೆಚ್ಚಿಸುವುದು.
- ಸಮಗ್ರ ಮೀನು ಕೃಷಿ ಮತ್ತು ನಿರ್ವಹಣೆ.
- ಅಲಂಕಾರಿಕ ಮೀನು ಉತ್ಪಾದನೆ
- ಮೀನು ಮರಿ ಪಾಲನೆ.
- ಸೊಳ್ಳೆಮರಿ ಭಕ್ಷಕ ಮೀನುಗಳ ಉತ್ಪಾದನೆ.
- ಆಧುನಿಕ ಜೇನು ಕೃಷಿ.
- ಕೈತೋಟ
- ಮೌಲ್ಯವರ್ಧಿತ ಆಹಾರ ಉತ್ಪಾದನೆ.
- ಬೇಕರಿ ಉತ್ಪನ್ನಗಳ ತಾಂತ್ರಿಕತೆ.
- ಹಾಲಿನ ಉತ್ಪನ್ನಗಳ ತಯಾರಿಕೆ.
- ಹಸಿರು ಮನೆ ಮತ್ತು ಅದರ ಉಪಯೋಗಗಳು.
- ಕೃಷಿ ಅರಣ್ಯ, ಸಾಮಾಜಿಕ ಅರಣ್ಯ, ಕೃಷಿ ತೋಟಗಾರಿಕೆ ಮತ್ತು ಖುಷ್ಕಿ ತೋಟಗಾರಿಕೆ.
- ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ.
- ಕೃಷಿಯಲ್ಲಿ ಜೈವಿಕ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನದ ಬಳಕೆ
- ಸ್ವ-ಸಹಾಯ ಗುಂಪುಗಳ ರಚನೆ ಮತ್ತು ಅಭಿವೃದ್ಧಿ.
- ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸ್ವ ಉದ್ಯೋಗದ ವೃತ್ತಿಪರ ತರಬೇತಿಗಳು.
- ಮುಕ್ತ ಮಾರುಕಟ್ಟೆ ವ್ಯವಸ್ಥೆ, ಜಾಗತೀಕರಣ ಮತ್ತು ಆಧುನೀಕರಣ.
- ಒಪ್ಪಂದ ಕೃಷಿ ಹಾಗೂ ವಿವಿಧ ಮಾರುಕಟ್ಟೆ ವ್ಯವಸ್ಥೆಗಳ ಕುರಿತು ಮಾಹಿತಿ.
- ಗ್ರಾಮೀಣ ಮುಖಂಡತ್ವ ಹಾಗೂ ಸಹಭಾಗಿತ್ವ ಮತ್ತು ಅವಶ್ಯಕತೆಗನುಗುಣವಾಗಿ ಇತರ ತರಬೇತಿಗಳು.

ಗ್ರಾಮೀಣ ಜನತೆಯ ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಸಂಪೂರ್ಣವಾಗಿ ನಿರತವಾಗಿರುವ ಈ ಸಂದರ್ಭದಲ್ಲಿ ಸಾರ್ವಜನಿಕರು, ವಿವಿಧ ಅಭಿವೃದ್ಧಿ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಜೊತೆ ಕೈಜೋಡಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**


ಕಾರ್ಯಕ್ರಮ ಸಂಯೋಜಕರು

**ತರಳಬಾಳು ಕೃಷಿ ವಿಜ್ಞಾನ ಕೇಂದ್ರ,**

ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್,

ಬಿ.ಐ.ಇ.ಟಿ.ರೋಡ್, ದಾವಣಗೆರೆ 577 004

ದೂರವಾಣಿ: 08192-263462, ಫ್ಯಾಕ್ಸ್: 08192-260969

ಮಿಂಚಂಚೆ: tkvk@taralabalu.org